# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **919** |
| ಉತ್ತರಿಸಬೇಕಾದ ದಿನಾಂಕ | : | 24.07.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಗೃಹ ಮಂಡಳಿ ವತಿಯಿಂದ ಪ್ರಸ್ತುತ ಎಷ್ಟು ಟೌನ್‌ಶಿಪ್‌ಗಳ ನಿರ್ಮಾಣ ಮಾಡಲಾಗುತ್ತಿದೆ ; | ಕರ್ನಾಟಕ ಗೃಹ ಮಂಡಳಿ ವತಿಯಿಂದ ಪ್ರಸ್ತುತ ಒಂದು ವಸತಿ ಬಡಾವಣೆ (ಟೌನ್‌ಶಿಪ್) ನಿರ್ಮಾಣ ಮಾಡಲಾಗುತ್ತಿದೆ.<br><br>ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಇಂಡ್ಲವಾಡಿ, ಬಗ್ಗನದೊಡ್ಡಿ, ಕಾಡುಜಕ್ಕನಹಳ್ಳಿ, ಕೋನಸಂದ್ರ ಮತ್ತು ಬೊಮ್ಮಂಡಹಳ್ಳಿ ಗ್ರಾಮಗಳಲ್ಲಿಯ ಒಟ್ಟು 1938 ಎಕರೆ 13 ಗುಂಟೆ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಾಣ ಯೋಜನೆಯನ್ನು ಹಮ್ಮಿಕೊಂಡಿದೆ. ಸದರಿ ವಸತಿ ಯೋಜನೆಯನ್ನು ಸ್ವಾಮಿ ವಿವೇಕಾನಂದ ಬಡಾವಣೆ (ಪ್ರಧಾನ ಮಂತ್ರಿ ಟೌನ್‌ಶಿಪ್) ಆಗಿ ನಿರ್ಮಾಣ ಮಾಡಲಾಗುತ್ತಿದೆ. ಪ್ರಸ್ತುತ 1202 ಎಕರೆ 23 ಗುಂಟೆ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಾಣ ಯೋಜನೆ ಪ್ರಗತಿಯಲ್ಲಿದೆ. |
| ಆ) | ಹೊಸಕೋಟೆ ಮತ್ತು ದೇವನಹಳ್ಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅತ್ಯಾಧುನಿಕ ಟೌನ್‌ಶಿಪ್ ನಿರ್ಮಾಣ ಕಾಮಗಾರಿಯು ಯಾವ ಹಂತದಲ್ಲಿದೆ ; | ಹೊಸಕೋಟೆ ಮತ್ತು ದೇವನಹಳ್ಳಿಯಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡುವ ಯೋಜನೆಯನ್ನು ಕೈಗೊಂಡಿರುವುದಿಲ್ಲ. ಸದರಿ ತಾಲ್ಲೂಕುಗಳಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.<br><br>ಹೊಸಕೋಟೆ ತಾಲ್ಲೂಕಿನಲ್ಲಿ ವಸತಿ ಯೋಜನೆಗಾಗಿ 71 ಎಕರೆ 29 ಗುಂಟೆ ಜಮೀನನ್ನು 50:50 ರ ಅನುಪಾತದಲ್ಲಿ ಪಾಲುದಾರಿಕೆಯಡಿ ಗುರುತಿಸಲಾಗಿದೆ. ಈ ಪೈಕಿ 54 ಎಕರೆ 23 ಗುಂಟೆ ಜಮೀನನ್ನು ಮಂಡಳಿಗೆ ಹಸ್ತಾಂತರ ಪಡೆಯಲಾಗಿದೆ.<br><br>ದೇವನಹಳ್ಳಿಯಲ್ಲಿ 27 ಎಕರೆ 02 ಗುಂಟೆ ಜಮೀನಿನಲ್ಲಿ 12 ಎಕರೆ 19 ಗುಂಟೆ ಜಮೀನು ಮಂಡಳಿಯ ಸ್ವಾಧೀನದಲ್ಲಿರುವ ಜಮೀನಾಗಿದ್ದು, ಉಳಿದ 14 ಎಕರೆ 23 ಗುಂಟೆ ಜಮೀನನ್ನು 50:50 ರ ಅನುಪಾತದಲ್ಲಿ ಪಾಲುದಾರಿಕೆಯಡಿ ಭೂಮಾಲೀಕರಿಂದ ಪಡೆಯಲಾಗಿದೆ.<br><br>ಪ್ರಸ್ತುತ ಉದ್ದೇಶಿತ ವಸತಿ ಯೋಜನೆಗಳಿಗಾಗಿ ವಿಸ್ತೃತ ಯೋಜನಾ ವರದಿ ಹಾಗೂ ವಿನ್ಯಾಸ ನಕ್ಷೆ ತಯಾರಿಕಾ ಹಂತಂದಲ್ಲಿರುತ್ತದೆ. |
| ಇ) | ಸದರಿ ನಿವೇಶನಕ್ಕಾಗಿ ಈಗಾಗಲೇ ಎಷ್ಟು ಅರ್ಜಿಗಳು ಬಂದಿವೆ ; ಹಾಗೂ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿಗಳನ್ನು ಕಟ್ಟಲು ಎಷ್ಟು ಹಣ ನಿಗದಿಪಡಿಸಲಾಗಿದೆ ; | ಸದರಿ ವಸತಿ ಯೋಜನೆಯ ನಿವೇಶನಕ್ಕಾಗಿ ಬಂದಿರುವ ಅರ್ಜಿಗಳು, ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿಯ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ಇದುವರೆಗೂ ಎಷ್ಟು ಹಣ ಸಂದಾಯವಾಗಿದೆ ಹಾಗೂ ಸಂದಾಯವಾಗಿರುವ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ ; ಠೇವಣಿ ರೂಪದಲ್ಲಿ ಎಷ್ಟು ಬಡ್ಡಿ ಸಂದಾಯವಾಗಿದೆ ; | ಇದುವರೆಗೂ ಎರಡು ಯೋಜನೆಗಳಿಂದ ಒಟ್ಟು ರೂ.26.68 ಕೋಟಿಗಳು ಸಂದಾಯವಾಗಿರುತ್ತದೆ.<br><br>ಅರ್ಜಿದಾರರಿಂದ ಪಡೆಯಲಾದ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿಯನ್ನು ಕರ್ನಾಟಕ ಗೃಹ ಮಂಡಳಿಯ ಯೂನಿಯನ್ ಬ್ಯಾಂಕ್ ಖಾತೆ, ಎಸ್.ಸಿ.ರೋಡ್ ಬ್ರಾಂಚ್ ಮೂಲಕ ಸ್ವೀಕೃತವಾಗಿದ್ದು, ಪ್ರತ್ಯೇಕ ಖಾತೆಗಳಲ್ಲಿ ಈ ಮೊತ್ತವನ್ನು ಸ್ವೀಕರಿಸದೇ ಇರುವ ಕಾರಣ, ಕರ್ನಾಟಕ ಗೃಹ ಮಂಡಳಿಯ ಬೇರೆ ಬೇರೆ ಯೋಜನೆಗಳ ಮೊತ್ತದಲ್ಲಿ ಇದು ಸೇರಿರುವ ಕಾರಣ, ನಿರ್ದಿಷ್ಟವಾಗಿ ಈ ಯೋಜನೆಯಡಿಯಲ್ಲಿ ಒಟ್ಟು ಎಷ್ಟು ಬಡ್ಡಿ ಸಂದಾಯವಾಗಿದೆ ಎಂಬುದನ್ನು ಈ ಹಂತದಲ್ಲಿ ತಿಳಿಸಲು ಸಾಧ್ಯವಾಗುತ್ತಿಲ್ಲ. |
| ಉ) | ಟೌನ್‌ಶಿಪ್‌ಗೆ ಅಗತ್ಯವಿರುವ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಭೂಮಿಯನ್ನು ನೀಡಿದ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರವನ್ನು ನೀಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಹಣ ಪರಿಹಾರ ನೀಡಲಾಗಿದೆ ಅಥವಾ ಪರಿಹಾರ ನೀಡದೆ ಇರಲು ಕಾರಣಗಳೇನು ? (ಮಾಹಿತಿ ನೀಡುವುದು) | ಹೊಸಕೋಟ ತಾಲ್ಲೂಕಿನಲ್ಲಿ ವಸತಿ ಯೋಜನೆಗಾಗಿ 71 ಎಕರೆ 29 ಗುಂಟೆ ಜಮೀನನ್ನು 50:50 ರ ಅನುಪಾತದಲ್ಲಿ ಪಾಲುದಾರಿಕೆಯಡಿ ಗುರುತಿಸಲಾಗಿದೆ. ಈ ಪೈಕಿ 54 ಎಕರೆ 23 ಗುಂಟೆ ಜಮೀನನ್ನು ಮಂಡಳಿಗೆ ಹಸ್ತಾಂತರ ಪಡೆಯಲಾಗಿದೆ.<br><br>ದೇವನಹಳ್ಳಿಯಲ್ಲಿ 27 ಎಕರೆ 02 ಗುಂಟೆ ಜಮೀನಿನಲ್ಲಿ 12 ಎಕರೆ 19 ಗುಂಟೆ ಜಮೀನು ಮಂಡಳಿಯ ಸ್ವಾಧೀನದಲ್ಲಿರುವ ಜಮೀನಾಗಿದ್ದು, ಉಳಿದ 14 ಎಕರೆ 23 ಗುಂಟೆ ಜಮೀನನ್ನು 50:50 ರ ಅನುಪಾತದಲ್ಲಿ ಪಾಲುದಾರಿಕೆಯಡಿ ಭೂಮಾಲೀಕರಿಂದ ಪಡೆಯಲಾಗಿದೆ.<br><br>ಸದರಿ ಯೋಜನೆಗಳು ಅನುಪಾತದ ಪಾಲುದಾರಿಕೆಯ ಯೋಜನೆಯಾಗಿರುವುದರಿಂದ ಭೂಮಾಲೀಕರಿಗೆ ಪರಿಹಾರವಾಗಿ ಅಭಿವೃದ್ಧಿಪಡಿಸುವ ನಿವೇಶನಗಳನ್ನು ನೀಡಲಾಗುವುದು. |

ಸಂಖ್ಯೆ :ವಇ 122 ಕೆಹೆಚ್‌ಬಿ 2024

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

## ಅನುಬಂಧ

1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ತೈಲಗೆರೆ ಗ್ರಾಮ

| ಕ್ರ. ಸಂ. | ವರ್ಗ | ಸ್ವೀಕರಿಸಿರುವ ಅರ್ಜಿಗಳು | ನೋಂದಣಿ ಶುಲ್ಕ | ಆರಂಭಿಕ ಠೇವಣಿ |
|---|---|---|---|---|
| 1 | EWS | 763 | 300/– | 10,000/– |
| 2 | LIG | 1842 | 500/– | 20000/– |
| 3 | MIG | 1800 | 1000/– | 30000/– |
| 4 | HIG | 1402 | 1500/– | 50000/– |
| ಒಟ್ಟು | | **5807** | | |

2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಪುಲಿಮಂಚಿ ಹಾಗೂ ಸಸಿಮಾಕನಹಳ್ಳಿ ಗ್ರಾಮಗಳು.

| ಕ್ರ. ಸಂ. | ವರ್ಗ | ಸ್ವೀಕರಿಸಿರುವ ಅರ್ಜಿಗಳು | ನೋಂದಣಿ ಶುಲ್ಕ | ಆರಂಭಿಕ ಠೇವಣಿ |
|---|---|---|---|---|
| 1 | EWS | 581 | 300/– | 10,000/– |
| 2 | LIG | 1340 | 500/– | 20000/– |
| 3 | MIG | 980 | 1000/– | 30000/– |
| 4 | HIG | 742 | 1500/– | 50000/– |
| | ಒಟ್ಟು | **3643** | | |

**ಕಾರ್ಯದರ್ಶಿ** 19/07/2024
**ಕರ್ನಾಟಕ ಗೃಹ ಮಂಡಳಿ**
ಬೆಂಗಳೂರು